ಸಿಸಿ ಸಂಖ್ಯೆ 3 – 2021 ಪಿ.ಡಬ್ಲ್ಯೂ- 1

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ 26.04.2023.

ಅರ್ಜಿಯ ಮೇಲಿನ ಮುಂದುವರಿದ ಪಾಟೀ ಸವಾಲು ಃ ಶ್ರೀ ಡಿ.ಆರ್.ಎಂ ನ್ಯಾಯಾವಾದಿಗಳಿಂದ ಃ

ನನ್ನ ನಿಜವಾದ ಹೆಸರು ಯೋಗೇಶ್ ಎಂ.ಜೆ ಆಗಿರುತ್ತದೆ, ಅದೇ ಹೆಸರಿನಲ್ಲಿ ಈ ಪ್ರಕರಣವನ್ನು ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿರುವ ದೂರಿನಲ್ಲಿ ನನ್ನ ಇನಿಷಿಯಲ್ ಎಂ.ಜೆ ಬದಲಿಗೆ ಹೆಚ್.ಸಿ ಎಂದು ನಮೂದು ಆಗಿರುತ್ತದೆ. ಆರೋಪಿಯು ನನಗೆ ಈ ಪ್ರಕರಣವನ್ನು ದಾಖಲಿಸುವ ಒಂದು ವರ್ಷ ದಿಂದ ಪರಿಚಯವಿರುತ್ತಾರೆ. ಒಂದು ವರ್ಷ ದಿಂದ ಆರೋಪಿಯು ಪರಿಚಯ ವಿರುವುದಾಗಿ ನನ್ನ ನೋಟೀಸಿನಲ್ಲಾಗಲಿ ಅಥವಾ ದೂರಿನಲ್ಲಾಗಲಿ ತಿಳಿಸಿರುವುದಿಲ್ಲ. ಆರೋಪಿಯು ನನಗೆ ನನ್ನ ತಮ್ಮನಾದ ಶ್ರೀನಿವಾಸ್ ರವರ ಮೂಲಕ ಪರಿಚಯವಾಗಿರುತ್ತಾರೆ. ಆರೋಪಿಯ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲಾ, ಆದರೆ ಅವರು ನನ್ನ ತಮ್ಮನ ಕ್ಲಾಸ್ ಮೇಟ್ ಆಗಿರುತ್ತಾರೆ. 5 ಲಕ್ಷ ರೂ ಹಣವನ್ನು ಕೋಡುವಾಗ ಆರೋಪಿಯ ಮನೆಯು ಸ್ವತ ಮನೆಯೋ ಅಥವಾ ಬಾಡಿಗೆ ಮನೆಯೋ, ಅವರ ಗಂಡ ಏನು ಕೆಲಸ ಮಾಡುತ್ತಿದ್ದಾರೆ ಎಂದು ತಿಳಿದು ಕೊಳ್ಳುವ ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿಯು ಮನೆಯು ಆರೋಪಿಗೆ ಸ್ವಂತ ಮನೆಯಾಗಿದ್ದು, ಅವರ ಗಂಡ ಏನು ಕೆಲಸ ಮಾಡುತ್ತಾರೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಆರೋಪಿಯ ಮನೆ ವಿಳಾಸವನ್ನು ನಾನು ಅವರ ಆದಾರ್ ಕಾರ್ಡ್ ಮೂಲಕ ನೋಡಿರುತ್ತೇನೆ. ಸದರಿ ಆದಾರ್ ಕಾರ್ಡ್ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆರೋಪಿಯು ಇರುವ ಮನೆಯು ಸ್ವಂತ ಮನೆಯೆಂದು ಆರೋಪಿಯೇ ಹೇಳಿರುತ್ತಾರೆ. ಅದಕ್ಕೆ ಸಂಬಂದ ನಾನು ದಾಖಲಾತಿಯನ್ನು ನೋಡಿರುವುದಿಲ್ಲ. ಆರೋಪಿಗೆ ಎಷ್ಟು ಮಕ್ಕಳು ಎಂದು ನನಗೆ ಗೊತ್ತಿಲ್ಲ. ಆರೋಪಿಯು ಸೀರೆ ವ್ಯಾಪಾರವನ್ನು ಮಾಡುತ್ತಾರೆ.

ಆರೋಪಿಯು ಯಾವ ತಾರೀಖಿನಂದು ಹಣವನ್ನು ಸಾಲವಾಗಿ ಕೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ದಿನಾಂಕವು ನಿಖರವಾಗಿ ಗೊತ್ತಿಲ್ಲ ಆದರೆ 2020 ರ ಜೂನ್ ತಿಂಗಳಿನ ಮೂರನೇ ವಾರದಲ್ಲಿ ಕೇಳಿರುವುದಾಗಿ ನುಡಿಯುತ್ತಾರೆ. ನಾನು ಮದ್ದೇಹಟ್ಟಿ

ಗ್ರಾಮದಲ್ಲಿ ವಾಸವಿರುತ್ತೇನೆ. ಆರೋಪಿಯು ನಮ್ಮ ಮನೆಗೆ ಒಬ್ಬರೇ ಬಂದು ಹಣವನ್ನು ಕೇಳಿರುತ್ತಾರೆ. ಆರೋಪಿಯು ನಮ್ಮ ಮನೆಗೆ ಬಸ್ಸಿನಲ್ಲಿ ಬಂದಿರುವುದಾಗಿ ಆರೋಪಿಯೇ ನನಗೆ ಹೇಳಿರುತ್ತಾರೆ. ಆರೋಪಿಯು ಬಂದಿದ್ದಾಗ ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ಮತ್ತು ನನ್ನ ಹೆಂಡತಿ ಇದ್ದೆವು. ಆರೋಪಿಯು ಬಂದಾಗ ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ಮತ್ತು ನನ್ನ ಹೆಂಡತಿ ಇದ್ದೆವು ಎಂಬ ಸಂಗತಿಯು ನೋಟೀಸು ಮತ್ತು ದೂರಿನಲ್ಲಿ ಹೇಳಿರುವುದಿಲ್ಲ. ಆರೋಪಿಯು ಸೀರೆ ವ್ಯಾಪಾರಕ್ಕಾಗಿ ನನ್ನಿಂದ ಹಣವನ್ನು ಸಾಲವಾಗಿ ಕೇಳಿರುತ್ತಾರೆ. ಆರೊಪಿಗೆ ನಾನು ಆಗಸ್ಟ್ ತಿಂಗಳಿನಲ್ಲಿ 5 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ನೀಡಿರುತ್ತೇನೆ. ನಿಖರವಾಗಿ ದಿನಾಂಕವನ್ನು ಹೇಳಲು ಈಗ ಆಗುತ್ತಿಲ್ಲ. ಹಣವನ್ನು ನಮ್ಮ ಮನೆಯಲ್ಲೇ ಕೊಟ್ಟಿರುತ್ತೇನೆ. ಹಣವನ್ನು ಪಡೆಯುವಾಗ ಆರೋಪಿಯು ಒಬ್ಬರೇ ಬಂದಿದ್ದರು. ಹಣವನ್ನು ಮನೆಯಲ್ಲಿ ಕೋಟ್ಟಿರುವುದಾಗಿ ನೋಟೀಸಿನಲ್ಲಿ ಮತ್ತು ದೂರಿನಲ್ಲಿ ಹೇಳಿರುತ್ತೇನೆ.

ನಾನು ಕೃಷಿಕನಾಗಿದ್ದು ನಮ್ಮ ಜಮೀನಿನಲ್ಲಿ ಕಬ್ಬು, ತೆಂಗು, ಮತ್ತು ಟಮೋಟೊ ವನ್ನು ಬೆಳೆಯುತ್ತಿದ್ದು ಹಾಗೂ ಬೇರೆಯೋರ ಜಮೀನನ್ನು ವಾರಕ್ಕೆ ಮಾಡುತ್ತಿದ್ದು ಅದರಿಂದ ಬಂದ ಆದಾಯದ ಮೂಲಕ ಆರೋಪಿಗೆ ನಾನು ಹಣವನ್ನು ಸಾಲವಾಗಿ ಕ್ಯೊಟಿರುತ್ತೇನೆ. ವಾರ್ಷಿಕವಾಗಿ ವ್ಯವಸಾಯದಿಂದ ಸುಮಾರು 1 ಲಕ್ಷ ಖರ್ಚು ಕಳೆದು ಸುಮಾರು 6 ಲಕ್ಷ ಆದಾಯವಿದೆ. ನನ್ನ ಹೆಸರಿನಲ್ಲಿ ಎರಡು ಕಾಲು ಎಕರೆ ಮತ್ತು ನಮ್ಮ ತಾಯಿ ಸಾಕಮ್ಮ ರವರ ಹೆಸರಿನಲ್ಲಿ ನಾಲ್ಕು ಎಕರೆ ಜಮೀನು ಇರುತ್ತದೆ ಮತ್ತು ವಾರಕ್ಕೆ ಸುಮಾರು 6 ರಿಂದ 7 ಎಕರೆ ಜಮೀನನ್ನು ವಾರಕ್ಕೆ ಮಾಡುತ್ತಿರುತ್ತೇನೆ. ವಾರಕ್ಕೆ ಮಾಡುತ್ತಿರುವ ಸಂಬಂಧ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ನಾನು ಬಾಯಿ ಮಾತಿನ ಮೂಲಕ ವಾರಕ್ಕೆ ಮಾಡುತ್ತಿದ್ದು ಯಾವುದೇ ದಾಖಲಾತಿಯನ್ನು ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಇಬ್ಬರೂ ಮಕ್ಕಳು ಇದ್ದು ಅವರಲ್ಲಿ ಒಬ್ಬರೂ 7 ನೇ ತರಗತಿ ಮತ್ತು ಇನ್ನೋಬ್ಬರು 10 ನೇ ತರಗತಿಯನ್ನು ಪುಷ್ಪಗಿರಿ ಶಾಲೆಯಲ್ಲಿ ಓದುತ್ತಿದ್ದು ಸುಮಾರು ವಾರ್ಷಿಕವಾಗಿ ಅವರಿಗೆ 50 ಸಾವಿರ ರೂ ಖರ್ಚು ಆಗುತ್ತದೆ. 6 ಲಕ್ಷ ಆದಾಯ ಬರುವುದನ್ನು ತೋರಿಸಲು ದಾಖಲಾತಿಯನ್ನು ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ. ಸಾಕ್ಷಿಯು ಮುಂದುವರೆದು ಸಕ್ಕರೆ ಕಾರ್ಖಾನೆ ನೀಡುವ ಬಿಲ್ಲುಗಳನ್ನು

ನಾನು ಹಾಜರು ಪಡಿಸುತ್ತೇನೆ. ಸಕ್ಕರೆ ಕಾರ್ಖಾನೆಯವರು ನಾವು ಮಾರಾಟ ಮಾಡಿದ ಹಣವನ್ನು ನೇರವಾಗಿ ನಾನು ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡ ಬ್ಯಾಂಕಿಗೆ ನೇರವಾಗಿ ಜಮಾ ಮಾಡುತ್ತಾರೆ. 2019 ರಲ್ಲಿ ಕಬ್ಬಿನ ವ್ಯಾಪಾರದಿಂದ ಎಷ್ಟು ಹಣ ಬಂದಿತ್ತು ಎಂದರೆ ಸಾಕ್ಷಿಯು ನನಗೆ ಮರೆತು ಹೋಗಿದ್ದು ಅದರ ಬಿಲ್ಲು ನೋಡಿದರೆ ಹೇಳುವುದಾಗಿ ನುಡಿಯುತ್ತಾರೆ. ತೆಂಗಿನ ಮಾರಾಟದಿಂದ ಆ ವರ್ಷ ಸುಮಾರು 1 ಲಕ್ಷದ 3 ಸಾವಿರ ರೂಗಳು ಆದಾಯ ಬಂದಿರುತ್ತದೆ. ಅದರ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಆರೋಪಿಯು ಹಣವನ್ನು ಪಡೆಯುವಾಗ ಒಂದು ತಿಂಗಳ ಒಳಗೆ ಅಂದರೆ ಸೆಪ್ಟೆಂಬರ್ ತಿಂಗಳಿನಲ್ಲಿ ವಾಪಸ್ಸು ಕೊಡುವುದಾಗಿ ಹೇಳಿದ್ದರು.

ನಾನು 5 ಲಕ್ಷ ರೂಪಾಯಿಗಳನ್ನು ಆರೋಪಿಗೆ ಬಡ್ಡಿಗಾಗಿ ನೀಡಿರುವುದಿಲ್ಲ. ಆರೋಪಿಯು ಒಂದು ತಿಂಗಳ ನಂತರ ನಮ್ಮ ಊರಿನ ದೇವಸ್ಥಾನಕ್ಕೆ ಬಂದಿದ್ದು ಆಗ ನನ್ನ ತಮ್ಮನ ಮೂಲಕ ಆರೋಪಿಯನ್ನು ಹಣವನ್ನು ವಾಪಸ್ಸು ಕೊಡುವಂತೆ ಕೇಳಿದ್ದು ಆಗ ಆರೋಪಿಯು ಖಾತೆಯಲ್ಲಿ ಹಣ ಇದ್ದು ಚಕ್ಕನ್ನು ಬ್ಯಾಂಕಿನಲ್ಲಿ ಹಾಜರು ಪಡಿಸುವ ಮೂಲಕ ಹಣ ಪಡೆದು ಕೊಳ್ಳುವಂತೆ ಹೇಳಿರುತ್ತಾರೆಂದು ನನ್ನ ತಮ್ಮ ನನಗೆ ಹೇಳಿರುತ್ತಾರೆ. ಈ ವಿಚಾರವನ್ನು ನೋಟಿಸಿನಲ್ಲಾಗಲಿ ಅಥವಾ ದೂರಿನಲ್ಲಾಗಲಿ ಹೇಳಿರುವುದಿಲ್ಲ. ನಿಪಿ-1 ಅನ್ನು ಆರೋಪಿಯು ನನಗೆ ಹಣವನ್ನು ನನ್ನಿಂದ ಸಾಲವನ್ನು ಪಡೆಯುವಾಗ ಕೊಟ್ಟಿರುತ್ತಾರೆ. ನಿಪಿ-1 ಅನ್ನು ಕೊಡುವಾಗಲೇ ಆರೋಪಿಯು ಅದರ ಮೇಲೆ 08-09-2020 ಎಂದು ದಿನಾಂಕ ವನ್ನು ನಮೂದಿಸಿ ಆ ದಿನಾಂಕದಂದು ಬ್ಯಾಂಕಿನಲ್ಲಿ ಹಾಜರು ಪಡಿಸುವಂತೆ ಆರೋಪಿಯು ನನಗೆ ಹೇಳಿದ್ದರು. ಆರೋಪಿಯು ನನಗೆ ನಿಪಿ-1 ಅನ್ನು ಕೊಡುವ ಮುಂಚೆ ಅದರಲ್ಲಿರುವ ವಿವರಣೆಯನ್ನು ಮೊದಲೆ ಬರೆದು ಕೊಂಡು ಬಂದಿದ್ದು ನನ್ನ ಮುದೆ ಸಹಿ ಮಾಡಿ ಕೊಟ್ಟಿರುತ್ತಾರೆ. ನಿಪಿ-1 ಎ ಸಹಿಯು ಮತ್ತು ನಿಪಿ-1 ರಲ್ಲಿರುವ ವಿವರಣೆಯು ಬೇರೆ ಬೇರೆ ಶಾಹಿಯ ಬಣ್ಣದಿಂದ ಬರೆಯಲಾಗಿದೆ ಎಂದರೆ ಸರಿ. ನಿಪಿ-1 ರಲ್ಲಿ ನಮೂದಿಸಿದ ದಿನಾಂಕದಂದೇ ದೇವಲಾಪುರ ಶಾಖೆಯ ಬ್ಯಾಂಕ್ ಆಫ್ ಬರೋಡ ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ. ನಿಪಿ-1 ಬೆಂಗಳೂರಿನ ಗಿರಿನಗರ ಶಾಖೆಯ ಕೆನರಾ ಬ್ಯಾಂಕಿಗೆ ಸೇರಿದ್ದು. ನಿಪಿ-1 ಅನ್ನು ಹಾಜರು ಪಡಿಸಿದ 2 ದಿನಕ್ಕೆ ಬ್ಯಾಂಕಿನವರು ಆರೋಪಿಯ ಖಾತೆಯು ಕ್ಲೋಸ್ ಆಗಿದೆ

ಎಂದು ಹಿಂಬರಹವನ್ನು ಕೋಟ್ಟಿರುತ್ತಾರೆ. ನಮ್ಮ ವಕೀಲರ ಮೂಲಕ ಆರೋಪಿಗೆ ನೋಟೀಸನ್ನು ನೀಡಿದ್ದು, ಸದರಿ ನೋಟೀಸು ಆರೋಪಿಗೆ ಜಾರಿಯಾಗದೇ ವಾಪಸ್ಸು ಬಂದಿರುವುದಾಗಿ ನಮ್ಮ ವಕೀಲರು ನನಗೆ ಹೇಳಿರುತ್ತಾರೆ. ಯಾವ ದಿನಾಂಕದಂದು ಆರೋಪಿಗೆ ನೋಟೀಸನ್ನು ನೀಡಿರುತ್ತೇನೆಂದು ನನಗೆ ಮರೆತು ಹೋಗಿರುತ್ತದೆ. ಆರೋಪಿಗೆ ಎರಡು ನೋಟೀಸನ್ನು ಕಳುಹಿಸಿರಬಹುದು.

ನಾನು ಬಿಪಿಎಲ್ ಪಡಿತರ ಚೀಟಿಯನ್ನು ಹೋಂದಿರುತ್ತೇನೆ. ಸದರಿ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ. ನನಗೂ ಮತ್ತು ಆರೋಪಿಗೂ ಪರಿಚಯ ವಿರುವುದಿಲ್ಲ ಮತ್ತು ವಿಶ್ವಾಸವೂ ಇರುವುದಿಲ್ಲ ಇಂದರೆ ಸರಿಯಲ್ಲ. ನನ್ನ ತಮ್ಮ ಅಕ್ರಮವಾಗಿ ಬೆಂಗಳೂರಿನಲ್ಲಿ ಚೀಟಿ ವ್ಯವಹಾರವನ್ನು ನಡೆಸುತ್ತಿದ್ದು, ಆ ಸಂಬಂಧ ಏಳೆಂಟು ವರ್ಷಗಳ ಹಿಂದೆ ಆರೋಪಿಗೆ ಸೇರಿ ಚಕ್ಕನ್ನು ಪಡೆದು ಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ನನ್ನ ತಮ್ಮನ್ನನ್ನು ಕೇಳಬೇಕೆಂದು ನುಡಿಯುತ್ತಾರೆ. ಚೀಟಿ ವ್ಯವಹಾರವು ಮುಗಿದ ಮೇಲೆ ಆರೋಪಿಯು ತನ್ನ ಚಕ್ಕನ್ನು ವಾಪಸ್ಸು ಕೇಳಿದ್ದು ಆಗ ನನ್ನ ತಮ್ಮನ್ನು ಹೊಸ ಚೀಟಿಯನ್ನು ಹಾಕುವಂತೆ ಆರೋಪಿಗೆ ಹೇಳಿದ್ದು, ಆದರೆ ಆರೋಪಿಯು ಚೀಟಿಯನ್ನು ಹಾಕದಿದ್ದಾಗ ಆರೋಪಿ ನೀಡಿದ ಚಕ್ಕಿನ ಮೂಲಕ ಅವರಿಂದ ಹಣವನ್ನು ವಸೂಲಿ ಮಾಡಲು ಈ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಅದು ನನಗೆ ನನ್ನ ತಮ್ಮನ್ನನ್ನು ಕೇಳಿ ಹೇಳಬೇಕೆಂದು ನುಡಿಯುತ್ತಾರೆ. ಸುಮಾರು 12-15 ವರ್ಷಗಳಿಂದ ಬ್ಯಾಂಕಿನಲ್ಲಿ ಖಾತೆಯನ್ನು ತೆಗೆದು ಬ್ಯಾಂಕಿನಲ್ಲಿ ವ್ಯವಹರಿಸಿದ್ದೇನೆ. 5 ಲಕ್ಷ ರೂಪಾಯಿಯನ್ನು ಆರೋಪಿಗೆ ಚಕ್ಕಿನ ಮೂಲಕ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆಗ ನನ್ನ ಬಳಿ ಚಕ್ಕುಗಳು ಇರಲಿಲ್ಲ ಎಂದು ನುಡಿಯುತ್ತಾರೆ. 5 ಲಕ್ಷಕ್ಕೂ ಮೀರಿ ನನ್ನ ಖಾತೆಯಲ್ಲಿ ಹಣವೂ ವಿನಿಮಯವಾಗಿದ್ದು, ಅದಕ್ಕೆ ಸಂಬಂದ ದಾಖಲೆಯನ್ನಉ ಹಾಜರು ಪಡಿಸಲು ನನಗೇನೂ ತೊಂದರೆ ಇಲ್ಲ. ಆರೋಪಿಗೆ ನಾನು 5 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣವನ್ನು ಕೊಡುವ ಕಾಲದಲ್ಲಿ ಕೋವಿಡ್-19 ನಿಂದಾಗಿ ಲಾಕ್ ಡೌನ್ ಜಾರಿಯಲ್ಲಿದ್ದು ಬಸ್ಸಿನ ಸಂಚಾರವು ಸ್ಥಗಿತ ಗೊಂಡಿತ್ತು ಎಂದರೆ ಸರಿ. ಆರೋಪಿಯ ಫೋನ್ ನಂಬರ್ ನನ್ನ ಬಳಿ ಇದ್ದು ನಾನು ಅವರಿಗೆ ಹಣವನ್ನು ಕೊಡುವ ಮುಂಚೆ ಮತ್ತು ನಂತರ ಫೋನಿನ ಮೂಲಕ

ಮಾತನಾಡಿರುತ್ತೇವೆ. ಆರೋಪಿಯು ನನ್ನನ್ನು ವಾಟ್ಸಪ್ ಮುಖಾಂತರ ಹಣವನ್ನು ಕೇಳಿರುವುದಿಲ್ಲ. ಆರೋಪಿಯ ಜೊತೆ ನನಗೆ ಯಾವುದೇ ರೀತಿಯ ಹಣ ಕಾಸಿನ ವ್ಯವಹಾರ ಮತ್ತು ವಿಶಶ್ವಾಸ ಇಲ್ಲದಿದ್ದರೂ ಸಹ ನನ್ನ ತಮ್ಮನ ಜೊತೆ ಷಾರೀಕ್ಕಾಗಿ ಈ ಸುಳ್ಳು ದೂರನ್ನು ಆರೋಪಿಯ ವಿರುದ್ದ ಸಲ್ಲಿಸಿರುತ್ತೇನೆ ಎಂದರೆ ಸರಿ ಇಲ್ಲ. 5 ಲಕ್ಷ ರಾಪಾಯಿ ಸಾಲ ಕೊಡುವಷ್ಟು ನನಗೆ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ